ಶ್ರೀ

ಶ್ರೀಮದಾಚಾರ್ಯರ ಸಾಕ್ಷಾತ್ ಶಿಷ್ಯರಾದ ....

ಶ್ರೀನರಹರಿತೀರ್ಥರ ಕೃತಿಗಳು

ಸಸೀತಾ ಮೂಲರಾಮಾರ್ಚಾ ಕೋಶೇ ಗಜಪತೇ ಸ್ಥಿತಾ
ಯೇನಾನೀತಾ ನಮಸ್ತಸ್ಮೈ ಶ್ರೀಮನ್ ನೃಹರಿ ಭಿಕ್ಷವೇ ॥

ಸಂಪಾದನೆ

ಶ್ರೀವಿಜಯವಿಟ್ಠಲ ಸಂಶೋಧನ ಪ್ರತಿಷ್ಠಾನ

ಶ್ರೀವಾಯುದೇವರ ಸ್ತೋತ್ರ

ಪದ : ೦೧ ರಾಗ : ಆನಂದಭೈರವಿ, ತಾಳ : ಆದಿ

ಎದುರ್‍ಯಾರೋ ಗುರುವೆ ಸಮರ್‍ಯಾರೋ ॥ ಪ ॥
ಮದನಜನಕಪದ ಪದುಮಷಟ್ಪದನೆ ॥ ಅ.ಪ ॥

ಜನನ ತರುಣದಲಿ ಇನಶಶಿ ಮಂಡಲ ಫಲವೆನುತಲಿ ಸವಿಯಲು ।
ವನಜಜ ಮುಖ್ಯರಶನಿತಾಕಾಗಮನ ದೀರ್ಘಾಯುವು ।
ಹನುಮಾಖ್ಯೆಯು ಕೊಡಲನುಪಮ ದೇಹದೊಳು ।
ಇನನೊಳು ನಿಗಮಗಳನು ವ್ಯಾಕರಣಗಳ ಗಗನ ಪಥದಿ ಕಲಿ ।
ದಿನಜನ ಸೇರಲು ಮನುವಂಶನ ಪದ ವನಜದ ಯುಗಕೆ ।
ದಿನಪತಿ ತನಯಗೆ ಘನ ಸುಸ್ನೇಹಗಳನು ಬೆಳಿಸುತ ಭೂ ।
ತನುಜೆಗರುಹತಲಿ ವನನಿಧಿ ಸೇರಿದ ವನಚರ ಮುಖ್ಯಾ ॥ ೧ ॥

ಘನ ಜವದಲಿ ಯೋಜನಶತ ಪರಿಮಿತ ವನನಿಧಿ ದಾಟುತ ।
ದನುಜರ ಪುರದೊಳು ಜನಕ ನೃಪಾತ್ಮಜಯನು ಕಾಣದೆ ।
ಮನದನು ತಾಪದಲುಪವನ ಸೇರಲು ಆ ದನುಜೆಯರ ನಡುವೆ ।
ವನಜಮುಖಿಯ ಪದವನಜವ ಕಾಣಲು ಅನುಮೋದದಿ ರಾ ।
ಮನ ಕುಶಲವ ಶ್ರೀವನಿತೆಗರುಹಿ ಕುರುಪಿನ ಮುದ್ರೆಯು ಕೊಡೆ ।
ಮಣಿಯುಕೊಡಲು ಕೊಂಡಲನಗೆ ಲಂಕೆಯನುಣಿಸಿ ಬಂ ।
ದ ನೃಪನೆಣಿಕೆಯ ಸಫಲಿಸಿದನುಪಮ ಶೌರ್ಯಾ ॥ ೨ ॥

ಕ್ಷಿತಿಯೊಳು ಕುಂತಿಸುತನಾಗೆ ದ್ರುಪದನ ಸುತನೆಯ ಮಾತೆಯ ।
ಮತದಿಂದೈವರು ಕೃತು ವೈವಾಹಿಸಿ ಅತಿಬಲನಾಗಾಯುತ ಸತ್ವರ ।
ಜರಾಸುತನ ಸದದು ಪ್ರಮುದಿತೆದಿಂದಿರೆ ಕ್ಷಿತಿಯಾಳುತ ಧೂರ್ತವಿ ।
ತತಿಕೃತ ದ್ಯೂತದಿ ಕ್ಷಿತಿ ಬಿಡುತಲಿ ಪರ್ವತ ವನಗಳ ತಿರುಹುತಲಿ ।
ವಿರಾಟ ಭೂಪತಿಯ ಸೇರಿ ದಿತಿಸುತ ಕೀಚಕನನ್ಮಥಿಸಿ ಪುರಕ ಬಂದತಿ ।
ರಥರಥಿಕರ ಪ್ರಥನದಿ ಸವರಿದ ಕ್ಷಿತಿಪತಿ ಚಂದ್ರಾ ॥ ೩ ॥

ಕಡು ಭೀಷಣಗದೆ ಪಿಡದಹಿತರ ಎದೆವಡಿಯಲು ಪರ್ಜಿಸು ।
ತಡೆ ಎಡೆ ಜಡೆಗಡಗಡನೆ ನಡುಗಿ ಪೊರೆ ಪೊರೆಗಳ ।
ಪಿಡಿಯುತ ಪುಡಿಪುಡಿ ಮಾಡುತ ಕಡಿಯಲು ಕ್ರೋಧದಿ ।
ಘುಡಿಘುಡಿಸುತ ನಿಜಮಡದಿಯ ಶರಗನು ಪಿಡಿದನ ರಕುತವ ।
ಮುಡಿದ ಕುರುಪತಿ ತೊಡೆಗಳ ಶೀಳೂತ ಕೆಡಹಿಯ ಶತ್ರುವ ।

ಪೊಡವಿಯೊಳಣ್ಣಗ ಕೊಡುತ ವಿಜಯ ಸುಧೆ ।
ಉಡುಪಕೀರ್ತಿಯ ಪಡೆದ ಲಕುಮಿಯಪಡೆದ ನರೇಂದ್ರಾ ॥ ೪॥

ಗುರು ಮಧ್ವಾಖ್ಯದಿ ಧರೆಯೊಳು ನೀನವತರಿಸಿ ನಿಗಮಗಳ ।
ವರಶಾಸ್ತ್ರಂಗಳ ಪರಿಶೋಧಿಸಿ ಕೇಸರಿ ಕರಿ ವೃಂದಗಳ್ ।
ಭರದಿಂದೋಡಿಪ ತೆರದಿಂ ಕುಮತರ ಪರಿದೋಡಿಸಿ ಸ ।
ತ್ಪುರುಷ ಕುಮುದ ಹಿಮಕರನಗೆ ನಿಗಮ ಸುರಧೇನುವಿನೊಳ್ ।
ಹರಿ ಸರ್ವೋತ್ತಮನೆಂಬುವ ಮಾತ್ಪಲ ಕರದು ಶಿಷ್ಯರೀ ।
ಗೆರದು ಕುವಾಧಿ ಕುಪುರುಷ ಕಮಲ ಹಿಮಕರನಗೆ ಮೆರದ್ಯೋ ।
ನರಹರಿ ರಘುಪತಿ ಭಕುತನೆ ಗುರುಮತಿರಾಯಾ ॥ ೫ ॥

ಪದ : ೦೨ ರಾಗ : ಪಂತುವರಾಳಿ, ತಾಳ : ಆದಿ

ಇಂತು ಮರುಳಾದೆನೊ ನಾ ಇಂತು ಮರುಳಾದೆ ॥ ಪ ॥

ಇಂತು ಮರುಳಾಗಿ ಬಯಲಿಗೆ ಬೀಳುವೆ ನಾ ।
ಸಂತತ ರಕ್ಷಿಸೈಯ್ಯಾ ರಘುಕುಲತಿಲಕ ॥ ಪ ॥

ಆರಿಗಾಗಿ ಧಾವತಿಗೊಂಬೆ ಆರಿಗೆ ಧನವನು ಬಚ್ಚಿಡುವೆ ।
ನಾರಿ ಪುತ್ರ ಮಿತ್ರಾದಿಗಳು ಬಾರದು ಸಂಗಡ ಎಂದರಿದೂ ॥ ೧ ॥

ಭ್ರಾಂತನಾಗಿ ಮೈಯ್ಯನೆ ಮರದೂ ಸಂತತ ತನ್ನ ತುತಿಸಿಕೊಳ್ಳುತ್ತಾ ।
ಚಿಂತೆ ಇಲ್ಲದೆ ಲೋಗರಜರಿವಾನಂತ ಸುಕೃತಗಳ ಸೂರೆಗೊಡುವಾ ॥ ೨ ॥

ಭವನ ವಾರ್ತಿಯಲಿ ಸಮಚಿತ್ತ ಭುವನೇಶನ ಕಥೆಯಲಿ ಬಹುಚಿತ್ತ ।
ಭವಕಾರಣರಲ್ಲಿ ಬಹುಮಾನಾ ಭವ ಅಘಹರರಲ್ಲಿ ಅಪಮಾನಾ ॥ ೩ ॥

ಸತಿಯಮ್ಯಾಲೆ ಬೈದರೆ ಬೈವಾ ಶ್ರೀಪತಿಯ ಬೈದರೆ ಕೇಳುತ ನಗುವಾ ।
ಮತಿಗೆಟ್ಟು ಮಾಯಲಂಪಟನಾಗೀ ಗತಿಯನಗಿಲ್ಲ ಹಾಹಾ ಎನುತಾ ॥ ೪ ॥

ತನ್ನ ಬೈದರೆ ಜೀವಕೆ ಮುನಿವಾ ಪನ್ನಗಶಯನ ಬೈದರೆ ನಲಿವಾ ।
ತನ್ನ ತಿನಸಿಗನುಕೂಲವಾಗೆ ಕುನ್ನಿಯಂತವರ ಬಾಗಿಲುಕಾಯಿವಾ ॥ ೫ ॥

ಸುಜನರಾಗಲಿ ತನಗಲ್ಲದವರಾ ಕುಜನರೆಂದು ಮತ್ತೆ ಬೋಧಿಸುತ್ತಾ ।
ಗಜಸ್ನಾನದಂತೆ ಕರ್ಮವಕಳದೂ ರಜಕನಂತೆ ಮತ್ತೆಮೆರವುತಲೀ ॥ ೬ ॥

ಧರ್ಮಕ್ಕೆಕಾಸು ಸಾಸಿರಹೊನ್ನು ಅಧರ್ಮಕ್ಕೆ ಕೋಟಿಹೊನ್ನೊಂದು ಕಾಸು।
ಧರ್ಮಮಾಡುವಲ್ಲಿ ಬ್ಯಾಸರಿಕೆ ಅಧರ್ಮಮಾಡುವಲ್ಲಿ ನಲಿದಾಟಾ ॥ ೭ ॥

ಕಕ್ಕುಲಾತಿ ಮಾಡಿ ಬಯಲೀಗೆ ಜಕ್ಕಿ ಕನ್ನಿಯರು ಮುಂತಾದಾ ।
ಭಿಕ್ಕರ ದೈವಾವ ಪೂಜಿಸುವಾ ಮುಖ್ಯ ವೈಷ್ಣವ ತಾನೆಂಬಾ ॥ ೮ ॥

ಪೆಸರು ವಡದು ಬದುಕದನರನೂ ಉಸುರುಳ್ಳ ಪೆಣನೆಂದು
ಬೋಧಿಸೂತಾ ।
ಪಶುಪನರನ ಬುದ್ಧಿಯಕೇಳಿ ವಿಷಯಲಂಪಟರ ಬಾಗಿಲುಕಾಯ್ವಾ ॥ ೯॥

ಡೊಂಬನಂತೆ ಬಯಲಿಗೆ ಹಲುಬೀ ಡಂಬಕತನದ ಭಕುತಿಮಾಡೀ ।
ಅಂಬುಜನಾಭಗ ದೂರವಾಗಿ ಕುಂಭಿಪಾಕಕ ಗುರಿಯಾಗೀ ॥ ೧೦ ॥

ಅನ್ನಾ್ಯಯದಲಿ ಧನವ ಘಳಿಸೀ ತನ್ನವರೆಂಬ ಸ್ವಾರ್ಥವ ಮಾಡೀ ।
ತನ್ನವರನು ಸಾಕುವತೆರದಿ ತನ್ನ ನಿಲಿಸುವರು ನರಕದಲೀ ॥ ೧೧ ॥

ಗಣಪತಿ ಸಿದ್ಧಾಂತವನೋದಿ ಹಣದ ಆಶಿಗೆ ವಿಪರೀತ ಮಾಡೀ ।
ಗಣಿಕಸುತನಂತೆ ನಿಜವರಿಯೆ ಬಣಗು ಡೊಂಬನಂತೆ –
ಹಲುಬುತಲೀ ॥ ೧೨ ॥

ಏಕಾಂತದಲಿ ಧನದಗೋಷ್ಟಿ ಲೋಕಾಂತದಲಿ ವೈರಾಗ್ಗ್ಯ ವಾರ್ತೆ ।
ಶ್ರೀಕಾಂತನ ಸೇವಿಗನುಮಾನ ಭೂಕಾಂತನ ಸೇವಿಗುತ್ಸಹಾ ॥ ೧೩ ॥

ಮುಪ್ಪಾಗಲು ಲೋಭ ಘನವಾಗೀ ಚಿಪ್ಪು ಮುಂತಾದದು ಬಚ್ಚಿಡುತಾ ।
ತಪ್ಪುಹೊರಿಸಿಕೊಳುತಲಿ ಮನೆಯಾ ಕಪ್ಪನೆಕಳಚಿತು ಕಾಯವನೆ ॥ ೧೪॥

ಮಾತಿನಲ್ಲಿ ಹರಿದಾಸತನಾ ನೀತಿಯಲ್ಲಿ ಪ್ರಭುದಾಸತನಾ ।
ಭೀತಿಬಡುವ ವಿಹೀತದಲ್ಲಿ ನಿರ್ಭೀತಿಲಿ ಮನೆಮನೆ ತಿರುವೆನೊ ॥ ೧೫ ॥

ದಾಸದಾಸಿ ವರ್ಗವನೆರಹೀ ಬ್ಯಾಸರದವರ ಸಲಹೀ ಸುಖಿಸೀ ।
ವಾಸುದೇವನಪೂಜಿಗೆ ಬೇಡೆ ವಂದುಕಾಸನು ಅರ್ಪಣೆಗಿಲ್ಲೆನುತಾ ॥ ೧೬॥

ಕಾಮವೆಂಬ ಮದಾವಾವರಿಸೀ ಶೀಮೆಯ ತಿರುಗುವ ಶುನಕನಂತೇ ।
ಕಾಮಿನಿಯರ ಭೋಗಕಾಗಿ ಧೂಮಕೇತನದ ಸತ್ಕುಲಕ್ಕೆ ॥ ೧೭ ॥

ರೋಷವೆಂಬ ಮದವಾವರಿಸೀ ಭೂಸುರರನೆ ನಿಂದಿಸಿ ನುಡಿವಾ ।
ಕ್ಲೇಶ ಅವರಚಿತ್ತಕೆ ಮಾಡಿ ದೋಷಮಯದಿ ನರಕದೊಳಿರುವಾ ॥ ೧೮ ॥

ಹೊರಿಯಬೇಕು ಉದರವಯೆನುತಾ ಧೊರೆಗಳಮನೆಯ ಬಾಗಿಲ –
ಕಾಯಿವಾ ।
ವರಬಿನುಗು ನುಡಿಕೇಳುತಮರುಗಿ ಕಿರಿಯತನಗಳಾ ನೆರೆಪೊತ್ತು ॥ ೧೯॥

ಪರರವಿರೋಧಿಸಿ ಧನವತಂದೂ ಹರಿಯಪೂಜೆಯ ಮಾಡಬೇಕೆನುತಾ ।
ಹಿರಿಯತನಕೆ ಬ್ಯಾರೆ ಬೆಂಬಲಿಸೀ ತಾನರಳುವ ನಾನಾ ನರಕದಲೀ ॥ ೨೦ ॥

ನೆಳಲು ನೀರು ಭೋಜನವಿಲ್ಲದೇ ಜ್ವಲಿಸುವ ಮಳಲಂತೆ ಮಾರ್ಗದಲೀ ।
ನೆಳಲು ನೀರು ಭೋಜನವಿಲ್ಲದೇ ಜ್ವಲಿಸುವೆನಾ ಸಜ್ಜನರಕಂಡೂ ॥ ೨೧ ॥

ಲೋಗರೊಡವಿಗಳನಪಹರಿಸೀ ಭೋಗಕೆ ಸಕಲವು ಬರಕೈದೂ ।
ಹಾಗವದಾನಕೆ ವೆಚ್ಚಿಸದೆ ಮೂಗು ಹಿಡಿದು ಶುಚಿ ತಾನೆಂಬಾ ॥ ೨೨ ॥

ಎಜಿಸು ಬ್ರಹ್ಮಾದಿ ವಂದಿತನಾ ತ್ಯಜಿಸು ಕಾಮಾದಿ ಹಗೆಗಳನಾ ।
ಸುಜನವಂದಿತಶಿರಿನರಹರಿಯಾ ಭಜಿಸಿಬದುಕು ಶ್ರೀರಘುಪತಿಯಾ ॥೨೩॥

ಪದ : ೦೩ **ರಾಗ : –, ತಾಳ : –**

ತಿಳಕೊ ನಿನ್ನೊಳಗೆ ನೀನೆ ಮರುಳೆ ।
ತಿಳಕೊ ನಿನ್ನೊಳಗೆ ನೀನೆ ॥ ಪ ॥

ತಿಳಕೊ ನಿನ್ನೊಳಗೆ ನೀ ಅಳುಕೊ ಪೋದಾಯುಷ್ಯ ।
ಕಳಕೊ ದುಷ್ಕರ್ಮವನ್ನು ವಿಷಯದಿಂ ।
ಸೆಳಕೊ ಇಂದ್ರಿಯಗಳನ್ನು ಸ್ವಲ್ಪಾರು ।
ಬೆಳಸಿಕೊ ಜ್ಞಾನವನ್ನು ಮರುಳೆ ॥ ಅ.ಪ ॥

ಅಹರ ನಿದ್ರಾಸಂಗ ಮಹರಾದಿ ಕ್ರಮಿಕೀಟ ।
ಸಹವಾಸ ದುರುಯೋನಿಗೂ ಇದ್ದದ್ದು ।
ಬಹುಶ ತಂದೂ ಮನಸಿಗೂ ಅಷ್ಟೇವೆ ।
ಸಹಿತವೆಂಬೆವು ನಿನಗೆ ಈ ಮಾತು ।
ವಿಹಿತವಲ್ಲವು ಎಂದಿಗೂ ಮರುಳೆ ॥ ೧ ॥

ಸಾದರದಿ ಜನರಿಂದ ಅಹುದೆನಿಸಿಕೊಂಬುವದು ।
ಸಾಧಾರಣವಲ್ಲೆಂದಿಗೂ ಚಿತ್ತೈಸಿ ।
ಮೋದದದಲಿ ಚರಿಸೋ ಇಂದು ಕೃಷಿಪೊಷ್ಯ ।
ವಾದ ವೃಷಭಾದಿಗಿಂದೂ ಈ ಧರ್ಮ ।
ಸಾದಿಸದೆ ಅಪ್ರಾಪ್ಯವೇನೊ ವಂದು ಮರುಳೆ ॥ ೨ ॥

ಸೋತು ನಡಥಾಂಗೆ ಬಹುಮಾತು ಕಥೆ ಚಾತುರ್ಯ ।
ನೀತಿವಾದದಲಿ ಧೈರ್ಯಾ ಮೊದಲಾದ ।

ನೀತಿಯನು ನಡಿಸೊ ಪಿರಿಯಾ ಜನ ।
ಪ್ರೀತಿಯ ಪಡಿಸೊ ಚರ್ಯಾ ಹಾಸ್ಯಗಾ ।
ಗಾರಾತ ಮಾಡುವದನರಿಯಾ ॥ ೩ ॥

ಧನ ದೊರಕಿಸಿ ದಿವ್ಯ ಮನೆ ಮಾಳ್ಗಳ ರಚಿಸಿ ।
ದಿನದಿನಕೆ ಪೆಚ್ಚುಸುತ್ತ ನಾಲವರೊಳು ।
ಘನತೆ ಅವನೆಂದೆನಿಸುತ್ತ ಇದ್ದದ್ದು ।
ಖನಗ ವೇಶ್ಯಾದಿ ಸಹಿತ ಅಂತ್ಯಜ ।
ಕೊನೆ ಜಾತಿಗಲ್ಲನೀತ ಮರುಳೆ ॥ ೪ ॥

ಮೀರಿ ಆಶನಾಶನದ ಸಾರಸುಖವನು ತನಗನು ।
ಸಾರಿ ಜನರಿಂದ ಕೂಡಿ ನಿರ್ಭಯದಿ ।
ಭಾರಿಭಾರಿಯಲಿ ರೂಢಿಯೊಳಗಿದ್ದ ।
ಘೋರಯಾತ್ರೆಗಳಮಾಡಿ ಚರಿಸುವ ।
ಭೈರಾಗಿಗಣವ ನೋಡಿ ಮರುಳೆ ॥ ೫ ॥

ಅವಗಹನ ಸ್ನಾನ ವಿಹಿತ ಜಪ ಸತ್ಕರ್ಮ ।
ಹವಿರನ್ನ ಭೋಜನವನ್ನು ಮಾಡುತ್ತ ।
ತ್ರಿವಿಧಜನ ಸಮ್ಮತಿಯನು ಬಿಡಿಸಿ ಮ ।
ತ್ತವರಿಂದ ಹಣವ ನೀನು ಬಿಡಿಸಲಾ ।
ಕವಿಗೇಯ ಮೆಚ್ಚೋನೇನೊ ಮರುಳೆ ॥ ೬ ॥

ದಾಸನೆಂದೆನಿಸಿ ಧನದಾಸೆಯಲಿ ಸರ್ವ ।
ದೇಶವನು ಸಂಚರಿಸಿ ಮುಡುಪಿನ ।
ಕಾಸುಗಳ ಸಂಪಾದಿಸಿ ನಿಜ ತನು ।
ಜಾ ಸತಿಸುತಾಪ್ತರಪೋಷಿಸಿ ಇದ್ದರೆ ।
ಘಾಸಿ ಯಮನಲ್ಲಿ ತಪ್ಪುವದೇನೊ ಹೇಸಿ ಮರುಳೆ ॥ ೭ ॥

ಹುಚ್ಚಾಗಿ ಕಲಿತು ಕಡಿ ಹೆಚ್ಚುತನವಾಕೃತಿಯ ।
ಕೊಚ್ಚುತ್ತ ಜನರಿಘೇಳಿ ಹೃದ್ದ್ವೇಷ್ಯ ।
ಬಚ್ಚಿಟ್ಟುಕೊಂಡು ಸೂಳಿಸೊಗಿನೋಲ್ ।
ತುಚ್ಛದಲಿಬದುಕಿ ಬಾಳಿ ಇದ್ದರೆ ಯಮನೋಡಿ ಯದಿ ।
ಗಿಚ್ಚಕ್ಕನೇನೋ ಖೋಡಿ ಮರುಳೆ ॥ ೮ ॥

ಬುದ್ದಿಯಿಂ ನ್ಯಾಯದಿಂ ಸಿದ್ಧಾಂತಗಳನೋದಿ ।

ಮುದ್ದು ಭಾಷಣಗಳಿಂದಾ ಸಭೆಯೊಳಗೆ ।
ಗೆದ್ದು ವಾದಿಗಳ ವೃಂದ ದೂರ ಪ್ರ ।
ಸಿದ್ಧನೆನಿಸಿದ್ದೆ ಛಂದ ಭಣುಗು ನಿನಗೆ ।
ಇದ್ದ ಮುದ್ದೆವೇ ಚಂದ ಮರುಳೆ ॥ ೯ ॥

ವೇದಾಂತ ಶಾಸ್ತ್ರವನು ಓದಿ ವಿಧ್ಯಾರ್ಥಿಗಳಿ ।
ಗೋದನೋದಕವ ಕೊಟ್ಟೂ ಪ್ರವಚನದ ।
ನಾದ ಉಂಟೆನೋ ಗುಟ್ಟು ।
ಯದ್ದ್ಯಪೀ ಸಾಧಿಸಿ ನುಡಿವ ಮಿಥ್ಥ್ಯಾ ।
ವಾದಿಗಾದರು ಏನಸಾಧ್ಯ ಈ ಕೃತ್ಯ ಮರುಳೆ ॥ ೧೦ ॥

ಆಗತಃ ಸಂಪ್ರಾಪ್ತವಾಗಿರುವ ಕೆಲವು ಬಹು ।
ಶ್ಯಾಗಮಸಿದ್ಧವಾದ ಚರ್ಯಗಳು ।
ಹೀಗಿತರ ಪ್ರಾಣಿಗಳಿಗೆ ಸಾಧಾರಣ ।
ವಾಗಿ ಮಾನುಷ್ಯಕರ್ಮವಾದ ಸೃಜಿಸುವದೆ ।
ನಾಗಶಯನನಿಗೆ ಮೋದ ಮರುಳೆ ॥ ೧೧ ॥

ಈ ಪರಿಯ ಸರ್ವ ವ್ಯಾಪಾರದಿಂದಲಿ ।
ನಾ ಪಾರಗಾಣುವಾ ಪಥವು ಇಲ್ಲೆಂದು ।
ಕೋಪದಲಿ ನುಡಿಸಲ್ಲವು ವ್ಯರ್ಥ ಸಂ ।
ತಾಪ ಬಡಲಾಗದು ನಿನ್ನಷ್ಟು ।
ಸಂಪತ್ತು ಇತರಿಗಾರಿಗು ಮತ್ತಿಲ್ಲವು ಮರುಳೆ ॥ ೧೨ ॥

ಆವಾವ ಕರ್ಮದಿಂ ಆವಾವ ವಿದ್ಯದಿಂ ।
ಗೋವಿಂದ ಪ್ರೀತನಾಗಿ ಸುಜ್ಞಾನ ।
ಈವ ಭಯ ಬಂಧನೀಗಿ ತತ್ಕೃತಿ ।
ಆ ವಿದ್ಯಂಗಳಿಗೆ ಆ ।
ಭುವನೆ ಸುಖಯೋಗಿ ಭೋಗಿ ಮರುಳೆ ॥ ೧೩ ॥

ಮಣಿಯು ಸಿಕ್ಕಿರಲದನು ತೃಣಮಾಡಿ ನಿಷ್ಕಾರ್ಯ ।
ದಣಿದು ನೀಚತ್ವವನ್ನೂ ಎಣಿಸದೆ ।
ನಾಮಾರ್ಥ ಮರ್ಮವನ್ನು ಎಚ್ಚರದೆ ।
ಕುಣಿಸಿ ಈ ದೇಹವನ್ನು ಇಲ್ಲಿರುಸಿ ।
ಉಣಬ್ಯಾಡ ದುಃಖವನ್ನು ಮರುಳೆ ॥ ೧೪ ॥

ಭರತಖಂಡದೊಳು ಭೂಸುರ ಜನ್ಮ ಸರ್ವಜ್ಞ ।
ವರ ಶಾಸ್ತ್ರದಧಿಕಾರವಾ ಕಳಕೊಳದೆ ।
ಚರಮ ಸೌಭಾಗ್ಯೋದ್ಭವ ಜ್ಞಾನದಿಂ ।
ವಿರಕುತಿ ಮೂಲವಮಾಡಿ (ಭಾವ)ಪಡಿಯೋ ನೀ ।
ನರಹರಿ ರಘುಪತಿಯ ಪ್ರೇಮಸುಖವಾ ಮರುಳೆ ॥ ೧೫ ॥

– ಶ್ರೀ ಮಧ್ವೇಶ ಶ್ರೀಕೃಷ್ಣಾರ್ಪಣಮಸ್ತು –